ದಿನಾಂಕಃ 04-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಐ ಎಸ್ ಡಿ ವಕೀಲರಿಂದ

ನಿಮ್ಮದು ಬಂಡಕೋಟೆ ಗ್ರಾಮ ಎಂದರೆ ಸರಿ. ಚಿಂತಾಮಣಿಯಿಂದ 12 ಕಿ. ಮೀಟರ್ ದೂರ ಇರುತ್ತದೆ. ನಿಮ್ಮ ಕುಟುಂಬ ಮತ್ತು ನೀವು ಎಲ್ಲಾ ಅಲ್ಲೆ ಇರುತ್ತೀರಿ ಎಂದರೆ ಸಾಕ್ಷಿಯು ಮೊದಲು ಟ್ಯಾಂಕ್ ಬಂಡ್ ರಸ್ತೆಯಲ್ಲಿ ಇದ್ದು ಈಗ ಬಂಡಕೋಟೆಯಲ್ಲಿ ಇರುತ್ತೇವೆ. ಬಂಡಕೋಟೆಯಲ್ಲಿ ನನ್ನದು ಸ್ವಂತ ಮನೆ ಇದೆ. ನನ್ನ ತಮ್ಮಂದಿರು ಬಂಡಕೋಟೆ ಗ್ರಾಮದಲ್ಲಿ ಇರುತ್ತಾರೆ. ನಿಮ್ಮ ಮತ್ತು ನಿಮ್ಮ ತಮ್ಮಂದಿರ ನಡುವೆ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿ. ನಾವು ಪಾಲು ವಿಭಾಗ ಮಾಡಿಕೊಂಡಿರುವ ಎಲ್ಲಾ ಆಸ್ತಿ ಪಿತ್ರಾರ್ಜಿತವಾಗಿದ್ದು ನನ್ನ ಪಾಲು ನನಗೆ ಬಂದಿರುತ್ತದೆ. ನಿಮ್ಮ ಪಾಲಿಗೆ ಬಂದಿರುವ ಜಮೀನಿನಲ್ಲಿ ನೀವು ಕೃಷಿ ಮಾಡುತ್ತಿದ್ದೀರಿ ಎಂದರೆ ಸರಿ. ಸುಮಾರು 30-40 ವರ್ಷಗಳಿಂದ ನಾನು ಕೃಷಿ ಮಾಡುತ್ತಿದ್ದೇನೆ. ನನಗೆ ಇಬ್ಬರು ಹೆಣ್ಣು ಮಕ್ಕಳು. ಬಂಡಕೋಟೆಯಲ್ಲಿ ಶಾಲೆ ಇದ್ದು ನಾನು ಮಕ್ಕಳನ್ನು ಚಿಂತಾಮಣಿಯಲ್ಲಿ ಓದಿಸಿರುತ್ತೇನೆ. 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಚಿಂತಾಮಣಿಯಲ್ಲಿ ಓದಿರುತ್ತಾರೆ ಬಂಡಕೋಟೆಯಿಂದ ಚಿಂತಾಮಣಿಗೆ ಬಸ್ ನ ವ್ಯವಸ್ಥೆ ಇದೆ ಎಂದರೆ ಇದೆ.

ನನ್ನ ವೃತ್ತಿಯೇ ಕೃಷಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಪಿ ಯು ಸಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ಈಗ ತೋರಿಸುತ್ತಿರುವ ಪೋಟೋದಲ್ಲಿ ಇರುವ ವ್ಯಕ್ತಿ ಯಾರು ಎಂದರೆ ಸಾಕ್ಷಿ ಯಾರು ಅಂತ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-12 ರಿಂದ ನಿಪಿ-14 ರ ಪೋಟೋದಲ್ಲಿ ಇರುವ ವ್ಯಕ್ತಿಗಳು ಯಾರು ಎಂದರೆ ಸಾಕ್ಷಿಯು ಶ್ರೀನಿವಾಸಯ್ಯ ಮತ್ತು ಪಾರ್ವತಮ್ಮ ಎಂದು ನುಡಿಯುತ್ತಾರೆ. ಶ್ರೀನಿವಾಸಯ್ಯ ಮತ್ತು ಪಾರ್ವತಮ್ಮ ರವರ ಮಗಳ ಮದುವೆ ನಾನು ಹೋಗಿರುವುದಿಲ್ಲ. ಶ್ರೀನಿವಾಸಯ್ಯ ಮತ್ತು ಪಾರ್ವತಮ್ಮ ರವರ ಮಗಳ ಮದುವೆ ಮಾಡಿಕೊಟ್ಟ ಪೋಟೋ ಎಂದರೆ ನನಗೆ ಗೊತ್ತಿರುವುದಿಲ್ಲ. ಶ್ರೀನಿವಾಸಯ್ಯ ರವರ ಮನೆ ಕಾರ್ಯಕ್ರಮಗಳಿಗೆ

ನಾನು ಹೋಗಿರುವುದಿಲ್ಲ. ಶ್ರೀನಿವಾಸಯ್ಯ ರವರು ನಿಮ್ಮ ಮನೆಯ ಯಾವ ಕಾರ್ಯ್ರಮಗಳಿಗೆ ಬಂದಿರುವುದಿಲ್ಲ ಎಂದರೆ ಬಂದಿರುವುದಿಲ್ಲ. ಶ್ರೀನಿವಾಸಯ್ಯ ರವರ ಮಗಳನ್ನು ಯಾವ ಶಾಲೆಯಲ್ಲಿ ಓದಿಸುತ್ತಿದ್ದರು ಅಂತ ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿಲ್ಲ. ಅವರು ಅವರ ಮಗಳಿಗೆ ಯಾವಾಗ ಯಾರಿಗೆ ಕನ್ಯಾದಾನ ಮಾಡಿಕೊಟ್ಟಿರುತ್ತಾರೆ ಅಂತ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ. ಪಾರ್ವತಮ್ಮ ಬೆಂಗಳೂರಿನ ಯಾವ ಆಸ್ಪತ್ರೆಯಲ್ಲಿ ಇದ್ದರು ಅಂತ ನಿಮಗೆ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ. ಶ್ರೀನಿವಾಸಯ್ಯ ಮತ್ತು ಪಾರ್ವತಮ್ಮ ರವರು ಯಾವಾಗ ತೀರಿಕೊಂಡರು ಅಂತ ನಿಮಗೆ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ.

ದಿ:18-05-2012 ರಲ್ಲಿ ಪಾರ್ತಮ್ಮ ಬೆಂಗಳೂರಿನಲ್ಲಿ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 2012 ರಲ್ಲಿ ನಿಮಗೆ ನಿರಂಜನ್ ಮತ್ತು ನಾಗರಾಜ್ ರವರು ಗೊತ್ತಿರುತ್ತಾರಾ ಎಂದರೆ ನಿರಂಜನ್ ರವರು ಗೊತ್ತಿರುತ್ತಾರೆ. ನಿರಂಜನ್ ಮತ್ತು ನೀವು ಮತ್ತು ಪಾರ್ಥಸಾರಥಿ ಬೇಟಿಯಾಗಿರುತ್ತೀರಾ ಎಂದರೆ ಸಾಕ್ಷಿಯು ದಿನವೂ ಸಿಗುತ್ತಿದ್ದರು. ಪಾರ್ಥಸಾರಥಿ ರವರ ಫೋನ್ ನಂಬರ್ 9738874799 ಆಗಿರುತ್ತದೆ. 2012 ನೇ ಇಸ್ವಿಯಿಂದ ಪಾರ್ಥಸಾರಥಿ ರವರು ಆ ನಂಬರ್ ಅನ್ನು ಚೇಂಜ್ ಮಾಡಿಲ್ಲ ಎಂದರೆ ಅದು ನನಗೆ ಗೊತ್ತಿರುವುದಿಲ್ಲ. ಪಾರ್ಥಸಾರಥಿ ಹಾಗೂ ನಿಮಗೆ ಎಷ್ಟು ವರ್ಷದಿಂದ ಬೇಟಿ ಇರುತ್ತದೆ ಎಂದರೆ ಸಾಕ್ಷಿಯು ಅಷ್ಟೊಂದು ಬೀಟಿ ಇರುವುದಿಲ್ಲ ಆದರೆ ಕಾಂಟ್ಯಾಕ್ಟ ನಲ್ಲಿ ಇರುತ್ತಾರೆ. ಈಗ 2-3 ತಿಂಗಳಿಂದ ಫೋನ್ ನಲ್ಲಿ ಪಾರ್ಥಸಾರಥಿ ರವರು ಫೋನ್ ನಲ್ಲಿ ಮಾತನಾಡುತ್ತಿದ್ದಾರೆ. ಇವತ್ತು ಕೂಡ ನ್ಯಾಯಾಲಯಕ್ಕೆ ಬನ್ನಿ ಅಂತ ಫೋನ್ ನಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಪಾರ್ಥಸಾರಥಿ ರವರು ನ್ಯಾಯಾಲಯದಲ್ಲಿ ಬಂದು ಸಾಕ್ಷ್ಯ ಹೇಳಬೇಕು ಅಂತ ಹೇಳಿರುತ್ತಾರೆ ಎಂದರೆ ನ್ಯಾಯಾಲಯದಿಂದ ನೋಟೀಸು ಬಂದಿರುತ್ತದೆ . ನೋಟೀಸು ಬಂದ ನಂತರ ಅವರ ವಕೀಲರನ್ನು ಹೋಗಿ ಬೇಟಿಯಾಗಿರುತ್ತೇವೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಯಾವುದೇ ದಾಖಲೆಗಳು ನಿಮ್ಮ ಬಳಿ ಇರಲಿಲ್ಲ ಎಂದರೆ ಸರಿ. ಅವುಗಳು ಪಾರ್ಥಸಾರಥಿ ರವರ ವಕೀಲರ ಬಳಿ ಇತ್ತು ಎಂದರೆ ಸರಿ. ಈ ದಾವೆಯಲ್ಲಿ ಅವರು ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿ ನ್ಯಾಯಾಲಯಕ್ಕೆ ಬಂದು ಈ

ಪ್ರಮಾಣ ಪತ್ರವನ್ನು ಸಲ್ಲಿಸಿ ಅಂತ ಹೇಳಿರುತ್ತಾರೆ ಎಂದರೆ ಸರಿ . ಅದು ಇಂಗ್ಲೀಷ್ ನಲ್ಲಿ ಇರುವುದರಿಂದ ಅದರಲ್ಲಿ ಏನು ದಾಖಲೆ ಇದೆ ಅಂತ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ವಕೀಲರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ ಪ್ರಮಾಣ ಪತ್ರದಲ್ಲಿ ಇಂಗ್ಲೀಷ್ ನಲ್ಲಿ ಬರೆದಿರುವ ಮಾಹಿತಿಯನ್ನು ನಿಮಗೆ ಅರ್ಥ ಮಾಡಿಕೊಳ್ಳಲು ಬರುವುದಿಲ್ಲ ಎಂದರೆ ಸರಿ.

2012 ರಲ್ಲಿ ಪಾರ್ಥಸಾರಥಿ ರವರನ್ನು ಎಷ್ಟು ಬಾರಿ ನೋಡಿರುತ್ತೀರಿ ಎಂದರೆ ಸಾಕ್ಷಿಯು ಈಗ ಎರಡು ಮೂರು ತಿಂಗಳಿಂದ ನೋಡಿರುತ್ತೇನೆ ಎಂದು ನುಡಿಯುತ್ತಾರೆ. 2012 ನೇ ಇಸ್ವಿಯಲ್ಲಿ ಯಾವ ಯಾವ ದಿನಾಂಕ ಪಾರ್ವತಮ್ಮ ನವರು ಎಲ್ಲಿ ಎಲ್ಲಿ ಇದ್ದರು ಅಂತ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ, ವೈಯುಕ್ತಿಕವಾಗಿ ನಿಮಗೆ ಚಿಂತಾಮಣಿಯಲ್ಲಿ ಯಾವುದೇ ಕೆಲಸ ಇರಲಿಲ್ಲ ಎಂದರೆ ಇರಲಿಲ್ಲ. ನಿಮಗೆ ಕೃಷಿಯನ್ನು ಹೊರತುಪಡಿಸಿದರೆ ಬೇರೆ ಯಾವುದೇ ಕೆಲಸ ಗೊತ್ತಿಲ್ಲ ಎಂದರೆ ಗೊತ್ತಿಲ್ಲ. 2012 ರಲ್ಲಿ ನೀವು ಬಂಡಕೋಟೆಯಲ್ಲಿ ವ್ಯವಸಾಯ ಮಾಡುತ್ತಿದ್ದೀರಿ ಎಂದರೆ ಸರಿ. ಚಿಂತಾಮಣಿಗೆ ಬರಬೇಕಾದರೆ ಯಾವುದಾದರೂ ಕೃಷಿ ಕೆಲಸ ಇದ್ದರೆ ಬರುತ್ತಿದ್ದೀರಿ ಎಂದರೆ ಸಾಕ್ಷಿಯು ಮಕ್ಕಳು ಇಲ್ಲೇ ಇದ್ದು ಬರುತ್ತಿದ್ದೆವು ಎಂದು ನುಡಿಯುತ್ತಾರೆ. ತಮ್ಮ ಬಳಿ ಚಿಂತಾಮಣಿಯಲ್ಲಿ ವಾಸ ಮಾಡುತ್ತಿದ್ದೀರಿ ಎನ್ನುವುದಕ್ಕೆ ಯಾವುದೇ ಬಾಡಿಗೆ ಪತ್ರ ಇರುವುದಿಲ್ಲ ಎಂದರೆ ಇರುವುದಿಲ್ಲ ನಿಮ್ಮ ಚುನಾವಣಾ ಗುರುತಿನ ಚೀಟಿ ನಿಮ್ಮ ಊರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಪಡಿತರ ಚೀಟಿ ಚಿಂತಾಮಣಿಯಲ್ಲಿ ಇದೆ ಎಂದು ನುಡಿಯುತ್ತಾರೆ. ನೀವು ಚಿಂತಾಮಣಿಯಲ್ಲಿ ವಾಸ ಮಾಡುತ್ತಿರುವುದು ತೋರಿಸುವುದಕ್ಕೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಕಿಲ್ಲ ಎಂದರೆ ಹಾಕಿಲ್ಲ. ಪಾರ್ವತಮ್ಮ ನವರ ಮೊಬೈಲ್ ಸಂಖ್ಯೆ ಮತ್ತು ಅವರ ಮನೆಯ ಲ್ಯಾಂಡ್ ಲೈನ್ ಸಂಖ್ಯೆ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ. ಪಾರ್ವತಮ್ಮ ಮತ್ತು ನೀವು ಸ್ನೇಹಿತರು ಅಲ್ಲ ಎಂದರೆ ಸರಿ. ಪಾರ್ವತಮ್ಮ ಮತ್ತು ನಿಮ್ಮ ನಡುವೆ ಯಾವುದೇ ಸಂಬಂಧ ಮತ್ತು ಯಾವುದೇ ವ್ಯವಹಾರ ಇರುವುದಿಲ್ಲ ಎಂದರೆ ಸರಿ. ಪಾರ್ವತಮ್ಮ ನವರು ಏನೇನು ದಾಖಲಾತಿಗಳನ್ನು ಯಾರು ಯಾರಿಗೆ ಮಾಡಿದ್ದಾರೆ ಎಂದು ನಿಮಗೆ

ಗೊತ್ತಿಲ್ಲ ಎಂದರೆ ಸಾಕ್ಷಿಯು ಬೇರೆಯದ್ದರ ಬಗ್ಗೆ ಗೊತ್ತಿರುವುದಿಲ್ಲ ವಿಲ್ ಮಾಡಿದರ ಬಗ್ಗೆ ಗೊತ್ತಿರುತ್ತದೆ.

ದಿ:19-05-2012 ರಂದು ಪಾರ್ವತಮ್ಮ ನವರು ಬೆಂಗಳೂರಿನಿಂದ ಚಿಂತಾಮಣಿಗೆ ಬಂದಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಸಾಯಿಬಾಬಾ ಮತ್ತು ಪಾರ್ವತಮ್ಮ ರವರ ವ್ಯವಹಾರ ಗೊತ್ತ ಎಂದರೆ ಗೊತ್ತಿರುವುದಿಲ್ಲ ಆದರೆ ಕರಾರು ಪತ್ರ ಮಾಡಿರುವ ಬಗ್ಗೆ ಹೇಳಿರುತ್ತಾರೆ ಆದರೆ ಅದನ್ನು ನೋಡಿರುವುದಿಲ್ಲ. ಪಾರ್ವತಮ್ಮ ರವರನ್ನು ದಿ:19-05-2012 ಬೆಂಗಳೂರಿನಿಂದ ಮದ್ಯಾಹ್ನ 3 ಗಂಟೆಗೆ ಕರಸಿಕೊಂಡಿರುತ್ತೀರಾ ಎಂದರೆ ಗೊತ್ತಿರುವುದಿಲ್ಲ. ಪಾರ್ಥಸಾರಥಿಗೆ ಎಷ್ಟು ಜನ ಅಕ್ಕ ತಂಗಿಯರು ಅಂತ ಗೊತ್ತಿಲ್ಲ ಎಂದರೆ ಬೇರೆಯವರು ಗೊತ್ತಿಲ್ಲ ಪಾರ್ವತಮ್ಮ ನವರು ಪಾರ್ಥಸಾರಥಿರವರ ಅಕ್ಕ ಎನ್ನುವ ವಿಚಾರ ಗೊತ್ತು. ಬೇರೆ ಅಕ್ಕ ತಂಗಿ ಅಣ್ಣ ರವರ ವಿಚಾರ ನನಗೆ ಗೊತ್ತಿಲ್ಲ.

ಪಾರ್ಥಸಾರಥಿರವರು ಗ್ರಾನೇಟ್ ವ್ಯವಹಾರ ಮತ್ತು ಬಾರ್ ನಡೆಸುತ್ತಿದ್ದರು ಎಂದರೆ ಗೊತ್ತಿರುವುದಿಲ್ಲ. ಪಾರ್ಥಸಾರಥಿರವರು ಸ್ವಂತ ಮನೆಯನ್ನು ಬೇರೆಯವರಿಗೆ ಮಾರಾಟ ಮಾಡಿರುವುದು ಗೊತ್ತ ಎಂದರೆ ಅದು ಗೊತ್ತಿಲ್ಲ. ಅವರಿಗೆ ಸ್ವಂತ ಮನೆ ಇರುವ ವಿಚಾರ ಗೊತ್ತಿಲ್ಲ, ಪಾರ್ಥಸಾರಥಿರವರು ಎಲ್ಲಿ ವಾಸವಾಗಿರುತ್ತಾರೆ ಎನ್ನುವ ವಿಚಾರ ಗೊತ್ತಿಲ್ಲ. ಪಾರ್ಥಸಾರಥಿರವರು ಯಾವ ವರ್ಷ ಬೆಂಗಳೂರಿಗೆ ಹೋಗಿರುತ್ತಾರೆ ಎನ್ನುವ ವಿಚಾರ ಗೊತ್ತಿಲ್ಲ. 2011 ರಲ್ಲಿ ಪಾರ್ಥಸಾರಥಿರವರು ಮನೆಯನ್ನು ಮಾರಿ ಬೆಂಗಳೂರಿಗೆ ಹೋಗಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ.

ನಿಡಿ-6 ರಲ್ಲಿ ಇರುವ ಮೊಬೈಲ್ ಸಂಖ್ಯೆ ಪಾರ್ಥಸಾರಥಿರಿಗೆ ಸೇರಿದ್ದು ಮತ್ತು ಅವರೇ ಹೇಳಿ ತಯಾರು ಮಾಡಿಸಿರುತ್ತಾರೆ ಎಂದರೆ ಸರಿ. ನಿಡಿ-2 ರಲ್ಲಿ ಇರುವ ಮೊಬೈಲ್ ಸಂಖ್ಯೆ ಪಾರ್ಥಸಾರಥಿಗೆ ಸೇರಿದ್ದು ಮತ್ತು ಅವರೇ ಹೇಳಿ ತಯಾರು ಮಾಡಿಸಿರುತ್ತಾರೆ ಎಂದರೆ ಅಲ್ಲ. ನಿಡಿ-2 ರಲ್ಲಿ ಮತ್ತು ನಿಡಿ-6 ರಲ್ಲಿ ಏನೇನು ವ್ಯವಹಾರ ಆಗಿರುತ್ತದೆ ಎಂಬ ವಿಚಾರ ನಿಮಗೆ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ. ಪಾರ್ವತಮ್ಮನವರು ಎಲ್ಲಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತಾರೆ ಅಂತ ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿರುವುದಿಲ್ಲ. ಅವರಿಗೆ ಇಂಗ್ಲೀಷ್ ಮತ್ತು ಕನ್ನಡ ಓದಲು ಬರುತ್ತದೋ ಇಲ್ಲವೋ ಗೊತ್ತಿಲ್ಲ ಎಂದರೆ ಸಾಕ್ಷಿಯು ಕನ್ನಡ ಓದುತ್ತಿದ್ದರು ಎಂದು ನುಡಿಯುತ್ತಾರೆ.

ಪಾರ್ವತಮ್ಮ ನವರ ಕನ್ನಡದಲ್ಲಿ ಇರುವ ಸಹಿಯನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿಯು ಪತ್ರದಲ್ಲಿ ಹಾಕಿರುವುದನ್ನು ನೋಡಿರುತ್ತೇನೆ ಸಾಕ್ಷಿಯು ಪಾರ್ವತಮ್ಮ ಸಹಿಯು ಅಭ್ಯಾಸ ಮಾಡಿ ಮಾಡಿದ ಹಾಗೆ ಇದೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಪಾರ್ವತಮ್ಮನವರು ಯಾವುದೇ ದೂರವಾಣಿ ಸಂಖ್ಯೆ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ನೀವು ಎಷ್ಟು ಪುಟಗಳಿಗೆ ಸಹಿ ಮಾಡಿದ್ದೀರಿ ಎಂದು ತಮಗೆ ಗೊತ್ತ ಎಂದರೆ ಸಾಕ್ಷಿಯು ಮೂರು ಸಹಿಗಳನ್ನು ಸಬ್ ರಿಜಿಸ್ಟ್ರಾರ್ ನ ಕಛೇರಿಯಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಮೂರು ದಾಖಲಾತಿಗಳಿಗೆ ಒಟ್ಟಿಗೆ ಮಾಡಿರುತ್ತೇನೆ. ತಾವು ಪತ್ರಕ್ಕೆ ಸಹಿ ಮಾಡುವಾಗ ತಮ್ಮನ್ನು ಸಾಕ್ಷಿಯಾಗಿ ಮಾಡಿರುತ್ತಾರಾ ಇಲ್ಲವಾ ಅಂತ ಹೇಳಿರುತ್ತಾರ ಎಂದರೆ ಹೇಳಿರುತ್ತಾರೆ. ಆ ಪತ್ರಕ್ಕೆ ಸಾಕ್ಷಿದಾರರಾಗಿದ್ದರೆ ಮಾತ್ರ ಪತ್ರಕ್ಕೆ ಸಹಿ ಮಾಡುತ್ತಾರೆ ಎಂದರೆ ಸರಿ . ಸಬ್ ರಿಜಿಸ್ಟ್ರಾರ್ ನಲ್ಲಿ ತಾವು ಸಾಕ್ಷಿದಾರರಾಗಬೇಕಾದರೆ ತಮ್ಮ ವಿಳಾಸ ಮತ್ತು ತಂದೆ ಹೆಸರು ಕೊಡಬೇಕು ಎಂದರೆ ಸರಿ.

ನಿಡಿ-1 ದಾಖಲೆಯಲ್ಲಿ ಸಾಕ್ಷಿದಾರರ ಕಾಲಂ ನಲ್ಲಿ ತಮ್ಮ ವಿಳಾಸ ಹೆಸರು ಇರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರ ಕಾಲಂ ನಲ್ಲಿ ಇದ್ದರೆ ಮಾತ್ರ ತಾವು ಸಾಕ್ಷಿಯಾಗಿ ಸಹಿ ಮಾಡಬಹುದು ಎಂದರೆ ಸರಿ. ಸಾಕ್ಷಿದಾರರ ಕಾಲಂ ನಲ್ಲಿ ನಾರಾಯಣಸ್ವಾಮಿ ಬಿನ್ ಸುಬ್ಬಣ್ಣ ಅಂತ ಇದ್ದು ಅವರು ಸಹಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿದಾರರ ಕಾಲಂ ನಲ್ಲಿ ತಮ್ಮ ಹೆಸರು ಇಲ್ಲದಿದ್ದರೂ ಕೂಡ ತಾವು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೀರಿ ಎಂದರೆ ಹೌದು. ನೀವು ಪಾರ್ಥಸಾರಥಿ ಒಟ್ಟಿಗೆ ಮಾಡಿರುತ್ತೀರಿ ಎಂದರೆ ಸರಿ. ನಿಡಿ-2 ರಲ್ಲಿ ಸಾಕ್ಷಿದಾರರ ಕಾಲಂ ನಲ್ಲಿ ತಾವಾಗಲೀ ತಮ್ಮ ಹೆಸರಾಗಲೀ ಇರುವುದಿಲ್ಲ ಎಂದರೆ ಸರಿ. ಆ ಸಾಕ್ಷಿದಾರರ ಕಾಲಂ ನಲ್ಲಿ ತಮ್ಮ ಹೆಸರು ಇಲ್ಲದಿದ್ದರೂ ನೀವು ಸಹಿ ಮಾಡಿರುತ್ತೀರಿ ಎಂದರೆ ಸರಿ. ನಿಡಿ-6 ರಲ್ಲಿ ಸಾಕ್ಷಿದಾರರ ಕಾಲಂ ನಲ್ಲಿ ಪಾರ್ಥಸಾರಥಿ , ನಾರಾಯಣಸ್ವಾಮಿ ಅಂತ ಇದ್ದು ತಾಹಿ ಸಾಕ್ಷಿದಾರರು ಅಲ್ಲ ಎಂದರೆ ಸರಿ. ನಿಡಿ-6 ರಲ್ಲಿ ನಿಮ್ಮ ಹೆಸರು ಬರೆದಿದ್ದು ಸಹಿ ಇರುವುದಿಲ್ಲ ಎಂದರೆ ಸರಿ. ಆಗ ನಿಮ್ಮ ಊರು ಬಂಡಕೋಟೆ ಅಂತ ಬರೆದಿದೆ ಎಂದರೆ ಸರಿ. ಆಗ ಬಂಡಕೋಟೆಯಲ್ಲಿ ಇದ್ದು ಅದಕ್ಕೆ ಬರೆದಿರುತ್ತಾರೆ ಎಂದರೆ ಚಿಂತಾಮಣಿಯಲ್ಲಿ

ಇರುತ್ತೇವೆ ಎಂದು ನುಡಿಯುತ್ತಾರೆ. ಆ ಮೂಲು ದಾಖಲೆಗಳಲ್ಲಿ ನೀವು ಚಿಂತಾಮಣಿಯಲ್ಲಿ ಇರುತ್ತೇವೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ಆ ಮೂರು ದಾಖಲೆಗಳಲ್ಲಿಯೂ ನಾನು ಹೇಳಿದಂತೆ ಬರೆದಿರುತ್ತಾರೆ ಅಂತ ಹೇಳುವವರ ಸಹಿ ಇರುವುದಿಲ್ಲ ಎಂದರೆ ಸಹಿ ಇರುವವರೇ ಹೇಳಿ ಬರೆಸಿರುತ್ತಾರೆ ಆ ಜಾಗದಲ್ಲಿ ಪಾರ್ತಮ್ಮನನವರ ಸಹಿ ಇರುವುದಿಲ್ಲ.

ಮುಂದುವರಿದ ಪಾಟೀಸಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.